ಇ) ಸದರಿ ವ್ಯವಸ್ಥೆಯನ್ನು ಕೂಡಲೇ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕಿದೆಯೇ; ಇದ್ದಲ್ಲಿ ಯಾವಾಗ ತರಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಬಿದ್ದ ಮರಗಳನ್ನು ಪ್ರತಿ ವರ್ಷವು ಅರಣ್ಯ ಇಲಾಖೆಯು ಅರಣ್ಯಗಳಿಂದ ತೆಗೆದು ಮಾರಾಟ ಮಾಡಲಾಗುತ್ತಿದೆ. ಆದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಅಭಯಾರಣ್ಯಗಳಲ್ಲಿ ಬಿದ್ದಿರುವ ಮರಗಳನ್ನು ತೆಗೆಯಲು ಅವಕಾಶವಿರುವುದಿಲ್ಲ.

ಆ) ಅರಣ್ಯದಲ್ಲಿ ವಯಸ್ಸಾದ ಮರಗಳನ್ನು ಕಡಿಯುವಂತೆ ಸರ್ಕಾರವು ಇತ್ತೀಚೆಗೆ ಆದೇಶ ನೀಡಿದೆ. ಈ ಆದೇಶದ ಪ್ರಕಾರ ಮರಗಳ ಸಾಂದ್ರತೆ ತೃಪ್ತಿಕರವಾಗಿರುವ, ಎಲೆ ಉದುರುವ ಅರಣ್ಯ ಪ್ರದೇಶಗಳಲ್ಲಿ ಇರುವ ಬಲಿತ ಮರಗಳನ್ನು ಕಾರ್ಯ ಯೋಜನೆಯಂತೆ ನಿಗದಿಪಡಿಸಿ ತೆಗೆಯಲು ಅವಕಾಶ ಇದೆ. ಆದರೆ ಈ ಆದೇಶದ ಅಡಿ ಈವರೆಗೆ ಯಾವುದೇ ಕಾರ್ಯ ಯೋಜನೆಗಳನ್ನು ಸಿದ್ಧಪಡಿಸಲಾಗಿಲ್ಲ. ಅದರಂತೆ ಯಾವುದೇ ವಯಸ್ಸಾದ ಮರಗಳನ್ನು ಕತ್ತರಿಸಲಾಗಿಲ್ಲ.

ಇ) ಅರಣ್ಯದಿಂದ ಸಾಗಣೆಕೆಯಾದ ಮರಗಳನ್ನು ಸರ್ಕಾರದ ನಾಟಾ ಸಂಗ್ರಹಾಲಯದಲ್ಲಿ ಸಾರ್ವಜನಿಕರಿಗೆ ಹರಾಜು ಮೂಲಕ ಮಾರಾಟ ಮಾಡಲಾಗುತ್ತಿದೆ. ಈ ಮರಗಳನ್ನು ಸುಧಾರಿತ ದರದಲ್ಲಿ ಕೊಡಲು ಅವಕಾಶವಿರುವುದಿಲ್ಲ.

ಹೊಸದಾಗಿ ತಾಲ್ಲೂಕುಗಳನ್ನು ರಚಿಸುವುದು

51 (238) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊಸದಾಗಿ ತಾಲ್ಲೂಕುಗಳನ್ನು ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ, ಯಾವ ಜಿಲ್ಲೆಯಲ್ಲಿ ಯಾವ ಹೊಸ ತಾಲ್ಲೂಕುಗಳನ್ನು ರಚಿಸಲಾಗುವುದು; (ಜಿಲ್ಲಾವಾರು ಮಾಹಿತಿ ನೀಡುವುದು)?

ಇ) ಸದರಿ ತಾಲ್ಲೂಕುಗಳನ್ನು 2002-2003ನೇ ಸಾಲಿನಲ್ಲಿ ರಚಿಸಲಾಗುವುದೇ;

ಈ) ರಚಿಸುವುದಾದಲ್ಲಿ ಕಾಲಮಿತಿ ನಿಗದಿಪಡಿಸಲಾಗಿದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಇಲ್ಲ, ಆದರೆ ಎಲ್ಲೆಲ್ಲಿ ಕೆಲಸದ ಒತ್ತಡ ಇದೆಯೋ ಅಲ್ಲಿ ವಿಶೇಷ ತಹಸೀಲ್ದಾರ್‌ರನ್ನು ನೇಮಕ ಮಾಡುವ ಬಗ್ಗೆ ಸರ್ಕಾರವು ತೀರ್ಮಾನಿಸಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) - ಉದ್ಭವಿಸುವುದಿಲ್ಲ -

ಇ) - ಉದ್ಭವಿಸುವುದಿಲ್ಲ -

ಈ) - ಉದ್ಭವಿಸುವುದಿಲ್ಲ -

ಮಿನಿ ವಿಧಾನಸೌಧದ ಕಾಮಗಾರಿ

53 (314) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?